# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –176(144)ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಸ ವಾರ್ಡ್ ಸಂಖ್ಯೆ: 176–ಸೋಮೇಶ್ವರನಗರ (ಹಳೆ ವಾರ್ಡ್–144) ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ಪ್ರದೀಪ್‌ಕುಮಾರ್ ಎನ್., ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಂಪೇಗೌಡನಗರ ಉಪವಿಭಾಗ ಹಾಗೂ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:25/11/2022 ರಂದು ಶುಕ್ರವಾರದಂದು ಮಧ್ಯಾಹ್ನ 12.00 ರಿಂದ 1.00 ರವರೆಗೆ ವಾರ್ಡ್ ಕಮಿಟಿ ಸಭೆಯನ್ನು ಟಿ. ಮರಿಯಪ್ಪ ರಸ್ತೆಯ ಬಯಲು ರಂಗ ಮಂದಿರದ ಹತ್ತಿರವಿರುವ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ಪ್ರದೀಪ್‌ಕುಮಾರ್ ಎನ್, ಸ.ಕಾ.ನಿ.ಅ (ಕೆ.ಗೌ.ನ) ಹಾಗೂ ನೋಡಲ್ ಅಧಿಕಾರಿ.
2. ಶ್ರೀ. ಆರ್. ಕೊಟ್ರೇಶ್ ನಾಯಕ್, ಸಹಾಯಕ ಅಭಿಯಂತರರು, ವಾರ್ಡ್–176(144).
3. ಹಾಗೂ ಸಾರ್ವಜನಿಕರಾದ ಶ್ರೀ. ಅಫ್ಜಲ್ ಪಾಷ (ಲಾಲ) ಹಾಗೂ ಶ್ರೀ. ಅಜ್ಮಲ್

*********

1. ನೋಡಲ್ ಅಧಿಕಾರಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಕಳೆದ ಸಭೆಯ ನಡವಳಿಗಳನ್ನು ಓದುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು. ಅದರಂತೆ ವಾರ್ಡ್ ಅಭಿಯಂತರರು ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿ ದೂರುಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು. ಅದರಂತೆ ಕಳೆದ ಸಭೆಯ ನಡವಳಿಗಳ ದೂರುಗಳನ್ನು ಪರಿಹರಿಸಲಾಗಿರುತ್ತದೆ.



Scanned with CamScanner

2. ಸಭೆಯಲ್ಲಿ ಹಾಜರಿದ್ದ ವಾರ್ಡಿನ ಸ್ಥಳೀಯರಾದ ಶ್ರೀ. ಅಫ್ಜಲ್ ಪಾಷ ರವರು ಮಾತನಾಡಿ ಸ್ಥಳೀಯ ವಾರ್ಡಿನಲ್ಲಿ ವಿದ್ಯುತ್ ವ್ಯತ್ಯಯವಾಗಿದ್ದು, ಮತ್ತು ಸೋಮೇಶ್ವರನಗರ 1ನೇ ಮತ್ತು 2ನೇ ಮುಖ್ಯರಸ್ತೆ ಬೀದಿ ದೀಪಗಳು ಕೆಲಸ ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಕೋರಿದರು. ಇದರನ್ವಯ ವಾರ್ಡ್ ಕಮಿಟಿ ಸಭೆಗೆ ಇತರೆ ಇಲಾಖೆಯ ಅಧಿಕಾರಿಗಳು ಹಾಜರಾಗದ ಹಿನ್ನೆಲೆಯಲ್ಲಿ ನೋಡಲ್ ಅಧಿಕಾರಿಯವರು ಮಾತನಾಡಿ ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಇಲಾಖೆಗಳಿಗೆ ಕ್ರಮ ವಹಿಸಲು ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

3. ವಾರ್ಡಿನ ಸ್ಥಳೀಯರಾದ ಶ್ರೀ. ಅಜ್ಮಲ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಕೆಲವೊಂದು ಸ್ಥಳಗಳಲ್ಲಿ ಕಸ ಸಮರ್ಪಕವಾಗಿ ವಿಲೇವಾರಿಯಾಗುತ್ತಿಲ್ಲ. ಸೋಮೇಶ್ವರನಗರ ಮುಖ್ಯರಸ್ತೆಯ ಬ್ರಾಂಡ್ ಫ್ಯಾಕ್ಟರಿ ಹತ್ತಿರ ರಸ್ತೆ ಗುಂಡಿ ಆಗಿದ್ದು, ಸರಿಪಡಿಸಲು, 5ನೇ ಮುಖ್ಯರಸ್ತೆ ಸೋಮೇಶ್ವರ ಕಾಲೋನಿಯಲ್ಲಿ ಕಾಮಗಾರಿ ನಿರ್ವಹಿಸುತ್ತಿರುವ ಸ್ಥಳದಲ್ಲಿ ಚರಂಡಿಯ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು, ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕುಡಿಯುವ ನೀರು ಕಲುಷಿತವಾಗಿದ್ದು, ಸರಿಪಡಿಸಲು ಕೋರಿದರು. ಇದರನ್ವಯ ವಾರ್ಡ್ ಕಮಿಟಿ ಸಭೆಗೆ ಇತರೆ ಇಲಾಖೆಯ ಅಧಿಕಾರಿಗಳು ಹಾಜರಾಗದ ಹಿನ್ನೆಲೆಯಲ್ಲಿ ನೋಡಲ್ ಅಧಿಕಾರಿಯವರು ಮಾತನಾಡಿ ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಇಲಾಖೆಗಳಿಗೆ ಕ್ರಮ ವಹಿಸಲು ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

4. ನೋಡಲ್ ಅಧಿಕಾರಿಯವರು ಮಾತನಾಡಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಇಲಾಖೆಯ ಸಮಸ್ಯೆಗಳ ಹೆಚ್ಚಾಗಿರುವುದರಿಂದ ಮುಂದಿನ ಸಭೆಯನ್ನು ಸದರಿ ಇಲಾಖೆಯ ಕಛೇರಿಯಲ್ಲಿಯೇ ನಡೆಸಲು ಉದ್ದೇಶಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

AO 25/11/2022

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 176(144)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 176(144)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner